ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ
ನ್ಯಾಯಾಲಯ, ಚಳ್ಳಕೆರೆ.

**ಃಉಪಸ್ಥಿತರುಃ**

**ಶ್ರೀ ಕೋಟೆಪ್ಪ ಕಾಂಬ್ಳೆ**
*ಬಿಕಾಂ.,ಎಲ್ಎಲ್.ಬಿ.,*

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು ಚಳ್ಳಕೆರೆ
ದಿನಾಂಕ 14 ನೇ ಫೆಬ್ರವರಿ 2018

# ಸಿ.ಸಿ.ನಂ.25/2016

**ಪಿರ್ಯಾದುದಾರರುಃ** ನಾಯಕನಹಟ್ಟಿ ಪೊಲೀಸ್
(ಸಹಾಯಕ ಸರ್ಕಾರಿ ಅಭಿಯೋಜಕರು)

**-*ವಿರುದ್ಧ* -**

**ಆರೋಪಿಗಳುಃ**

1. ವೆಂಕಟೇಶ್ ಬಿನ್ ದುರುಗಪ್ಪ,
ವಯಸ್ಸುಃ 30 ವರ್ಷ.
2. ಓಬ ಬಿನ್ ದುರುಗಪ್ಪ,
ವಯಸ್ಸುಃ 39 ವರ್ಷ.
3. ರಾಮ ಬಿನ್ ದುರುಗಪ್ಪ,
ವಯಸ್ಸುಃ 37 ವರ್ಷ.
4. ಚಂದ್ರ ಬಿನ್ ಕಿವುಡ ಬೋಸಯ್ಯ,
ವಯಸ್ಸುಃ 37 ವರ್ಷ.

ವಾಸಃ ಎಲ್ಲರೂ ಗೊಲ್ಲಹಳ್ಳಿ ಗ್ರಾಮದ ವಾಸಿಗಳು, ಚಳ್ಳಕೆರೆ ತಾಲ್ಲೂಕು.

| | | |
|---|---|---|
| 1. | ಅಪರಾಧ ಜರುಗಿದ ದಿನಾಂಕ | 12.07.2015 |
| 2. | ಅಪರಾಧವನ್ನು ವರದಿ ಮಾಡಿದ ದಿನಾಂಕ | 07.08.2015 |
| 3. | ಫಿರ್ಯಾದುದಾರರ ಹೆಸರು | ಪಾಪಯ್ಯ |
| 5. | ವಿಚಾರಣೆ ಪ್ರಾರಂಭವಾದ ದಿನಾಂಕ | 19.01.2018 |

| | | |
|---|---|---|
| 6. | ವಿಚಾರಣೆ ಮುಕ್ತಾಯವಾದ ದಿನಾಂಕ | 19.01.2018 |
| 7. | ಆಪಾದನೆಗಳು | *ಭಾ. ದಂ. ಸಂ. ಕಲಂ 504, 324, 506(2) ಸಹವಾಚಕ 34.* |
| 8. | ನ್ಯಾಯಾಧೀಶರ ಅಭಿಪ್ರಾಯ | ನಿರ್ದೋಷಿ ಎಂದು ಪರಿಗಣಿಸಲಾಗಿದೆ |
| 9. | ಫಿರ್ಯಾದುದಾರರನ್ನು ಪ್ರತಿನಿಧಿಸುವವರು | ಸಹಾಯಕ ಸರ್ಕಾರಿ ಅಭಿಯೋಜಕರು |
| 10 | ಆರೋಪಿತರ ಪರ ವಕೀಲರು | ಬಿ.ಟಿ.ಜಿ., ವಕೀಲರು |

# ತೀರ್ಪು

*ಭಾ. ದಂ. ಸಂ. ಕಲಂ 504, 324, 506(2) ಸಹವಾಚಕ 34.* ರಡಿಯಲ್ಲಿ ಆರೋಪಿಸಿ ನಾಯಕನಹಟ್ಟಿ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

2. **ಅಭಿಯೋಜಕ ಪಕ್ಷದವರ ಕೇಸಿನ ಸಾರಾಂಶ ಈ ಕೆಳಕಂಡಂತೆ ಇದೆಃ–**

ದಿನಾಂಕಃ 12.07.2015 ರಂದು ಸಂಜೆ 05.00 ಗಂಟೆ ಸಮಯದಲ್ಲಿ ನಾಯಕನಹಟ್ಟಿ ಠಾಣಾ ವ್ಯಾಪ್ತಿಯ ಎತ್ತಿನಹಟ್ಟಿ (ಗೊಲ್ಲಹಳ್ಳಿ) ಗ್ರಾಮದಲ್ಲಿ ಚಾಸಾ–1 ಮತ್ತು 2 ರವರು ತಮ್ಮ ವಾಸದ ಮನೆ ಬಳಿ ಇದ್ದಾಗ ಇರುವ ಆರೋಪಿತರು ಬಂದು ಚಾಸಾ–1 ಮತ್ತು 2 ರವರನ್ನು ಕುರಿತು ಸೂಳೆಮಗನೆ, ಬೋಳಿಮಗನೆ ಎಂದು ಬಾಯಿಗೆ ಬಂದಂತೆ ಬೈದಾಡುತ್ತ ಗಲಾಟೆ ಶುರುಮಾಡಿ 4 ನೇ ಆರೋಪಿಯೂ ತನ್ನ ಕೈಯಲ್ಲಿದ್ದ ಕೊಡಲಿಯಿಂದ ಚಾಸಾ–2 ರವರ ಮೇಲೆ ಹಲ್ಲೆ ಮಾಡಲು ಮುಂದದಾಗ ಚಾಸಾ–1 ಮತ್ತು 2 ರವರು

ಕಿರುಚಿಕೊಂಡಿರುತ್ತಾರೆ, ಹಾಗೂ 4 ನೇ ಆರೋಪಿರವರು ಚಾಸಾ–2 ರವರಿಗೆ ಸೂಳೆಮಗನೆ ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಅಲ್ಲಿಯೇ ಇದ್ದ ಕಲ್ಲನ್ನು ತೆಗೆದುಕೊಂಡು ಚಾಸಾ–2 ರವರಿಗೆ ಎಸೆದಿದ್ದು, ಕಲ್ಲು ಚಾಸಾ–2 ರವರ ಎದೆಗೆ ಬಿದ್ದಿರುತ್ತದೆ. ಈ ಬಗ್ಗೆ ಚಾಸಾ–2 ರವರು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ, ಅಂತಾ ತನಿಖೆಯಿಂದ ಧೃಡಪಟ್ಟಿರುತ್ತದೆ, ಅಂತಾ ಆರೋಪಿಸಿ ಚಾಸಾ–1 ರವರು ದೂರು ನೀಡಿದ ಆಧಾರದ ಮೇಲೆ ನಾಯಕನಹಟ್ಟಿ ಪೊಲೀಸರು ತಮ್ಮ ಠಾಣಾ ಗುನ್ನಾ ನಂಃ 83/2015 ಎಂದು ದಾಖಲಿಸಿಕೊಂಡು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು ಜರುಗಿಸಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ತನಿಖೆ ಪೂರೈಸಿ ಆರೋಪಿಗಳ ವಿರುದ್ಧ ದೋಷರೋಪಣಾ ಪಟ್ಟಿ ಸಲ್ಲಿಸಿದ್ದು ಇರುತ್ತದೆ.

3. ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಈ ನ್ಯಾಯಾಲಯವು ಪ್ರಕರಣವನ್ನು ಸಂಜ್ಞೆಗೆ ತೆಗೆದುಕೊಂಡು ಆರೋಪಿಗಳಿಗೆ ಸಮನ್ಸ್ ನ್ನು ನೀಡಿದ್ದು ಅದರ ಪ್ರಕಾರ ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡು ಜಾಮೀನಿನ ಮೇಲೆ ಇರುತ್ತಾನೆ.

4. ಆರೋಪಿಗಳಿಗೆ ಅಭಿಯೋಜನಾ ಪಕ್ಷದ ಪರವಾದ ದಾಖಲೆಗಳನ್ನು ನೀಡಿದ ನಂತರ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿ ಆರೋಪಿಗಳು ತಾವು ಯಾವುದೇ ತಪ್ಪು ಮಾಡಿರುವುದಿಲ್ಲ ಪ್ರಕರಣದಲ್ಲಿ

ವಿಚಾರಣೆ ಆಗಬೇಕು ಎಂದು ಕೇಳಿಕೊಂಡ ಮೇರೆಗೆ ಅಭಿಯೋಜನಾ ಪಕ್ಷದ ಪರವಾಗಿ ಸಾಕ್ಷಿಗಳ ವಿಚಾರಣೆ ಮಾಡಲಾಗಿರುತ್ತದೆ.

5. ಅಭಿಯೋಜನಾ ಪಕ್ಷದ ಪರವಾಗಿ ಈ ಪ್ರಕರಣದಲ್ಲಿ ಒಟ್ಟು 10 ಜನ ಸಾಕ್ಷಿದಾರರ ಪೈಕಿ ಮೂವರನ್ನು ಸಾಕ್ಷಿದಾರರನ್ನಾಗಿ ಪಿ.ಡಬ್ಲ್ಯೂ-1 ರಿಂದ ಪಿ.ಡಬ್ಲ್ಯೂ-3 ಎಂದು ವಿಚಾರಣೆ ಮಾಡಲಾಗಿದ್ದು, ಮೂರು ನಿಷಾನೆಗಳಾನ್ನಾಗಿ ನಿಪಿ-1 ರಿಂದ ನಿಪಿ-3 ಎಂದು ಗುರುತಿಸಲಾಗಿದೆ. ಚಾಸಾ-1 ರಿಂದ ಚಾಸಾ-3 ರವರು ನೊಂದ ವ್ಯಕ್ತಿಗಳಾಗಿದ್ದು ಅವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಸ.ಸ.ಅ ರವರು ಉಳಿದ ಸಾಕ್ಷಿದಾರರಿಗೆ ಸಮನ್ಸ ನೀಡುವಂತೆ ಕೋರಿರುತ್ತಾರೆ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಲ್ಲಿ ಯಾವುದೇ ಪ್ರಯೋಜನೆ ಇಲ್ಲ ಅಂತ ಸ.ಸ.ಅ ರವರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ.

6. ಅಭಿಯೋಜನೆಯು ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿಗಳ ವಿರುದ್ಧ ದೋಷ ಹೊರಿಸುವ ಯಾವುದೇ ಹೇಳಿಕೆ ಕಂಡು ಬರದೆ ಇರುವುದರಿಂದ ದಂ.ಪ್ರ.ಸಂ. ಕಲಂ 313 ರ ಅಡಿಯಲ್ಲಿ ದಾಖಲಿಸಿಕೊಳ್ಳಬೇಕಾದ ಆರೋಪಿಗಳ ಹೇಳಿಕೆಯನ್ನು ಕೈಬಿಡಲಾಗಿರುತ್ತದೆ. ಆರೋಪಿಗಳು ತಮ್ಮ ಪರವಾಗಿ ಯಾವುದೇ ಸಾಕ್ಷಿಯನ್ನು ವಿಚಾರಣೆ ಮಾಡಿರುವುದಿಲ್ಲ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಕೇಳಲಾಯಿತು.

8. ಈ ಕೆಳಕಂಡ ಅಂಶಗಳು ಈ ಪ್ರಕರಣದಲ್ಲಿ ತೀರ್ಮಾನಿಸ ಬೇಕಾಗಿರುತ್ತವೆ

(1) ದಿನಾಂಕಃ 12.07.2015 ರಂದು ಸಂಜೆ 05.00 ಗಂಟೆ ಸಮಯದಲ್ಲಿ ಗೊಲ್ಲಹಳ್ಳಿ ಗ್ರಾಮದಲ್ಲಿ ಚಾಸಾ–1 ಮತ್ತು 2 ರವರು ತಮ್ಮ ವಾಸದ ಮನೆ ಬಳಿ ಇದ್ದಾಗ ಆರೋಪಿತರು ಬಂದು ಚಾಸಾ–1 ಮತ್ತು 2 ರವರಿಗೆ ಸೂಳೇಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದರಿಂದ ಆರೋಪಿಗಳು ಭಾ. ದಂ. ಸಂ. ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(2) ಮೇಲ್ಕಂಡ ದಿನಾಂಕ ಸಮಯ ಮತ್ತು ಸ್ಥಳದಲ್ಲಿ 4 ನೇ ಆರೋಪಿಯು ಕಲ್ಲನ್ನು ತೆಗೆದುಕೊಂಡು ಚಾಸಾ–2 ರವರಿಗೆ ಎಸೆದಿದ್ದ ಕಲ್ಲು ಚಾಸಾ–2 ರವರ ಎದೆಗೆ ಬಿದ್ದು ಸಾಮಾನ್ಯ ಸ್ವರೂಪದ ನೋವುಪಡಿಸಿದ್ದರಿಂದ ಆರೋಪಿಯು ಭಾ. ದಂ. ಸಂ. ಕಲಂ 324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(3) ಮೇಲ್ಕಂಡ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಚಾಸಾ–2 ರವರಿಗೆ 2 ನೇ ಆರೋಪಿಯಾದ ನೀವು ಸೂಳೇಮಗನೆ ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದರಿಂದ ಆರೋಪಿಯು ಭಾ. ದಂ. ಸಂ. ಕಲಂ 506(2) ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(4) ಯಾವ ಆದೇಶ?

9. ಈ ಮೇಲಿನ ಅಂತಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತೆ ಇರುತ್ತವೆ

ಅಂಶ ನಂ.1:- ನಕರಾತ್ಮಕವಾಗಿ,

ಅಂಶ ನಂ.2:- ನಕರಾತ್ಮಕವಾಗಿ,

ಅಂಶ ನಂ.3:- ನಕರಾತ್ಮಕವಾಗಿ,

ಅಂಶ ನಂ.4:- ಅಂತಿಮ ಅದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ.

## ಕಾರಣಗಳು

10. **ಅಂಶ ನಂ.1 ರಿಂದ 3ಃ-** ಅಂಶ ನಂ.1 ರಿಂದ 3 ಇವುಗಳು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯದಂತಹ ಚರ್ಚೆ ಹಾಗೂ ವಿಮರ್ಶೆಯ ಅವಶ್ಯಕತೆ ಇದ್ದು, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ದಿನಾಂಕಃ 12.07.2015 ರಂದು ಸಂಜೆ 05.00 ಗಂಟೆ ಸಮಯದಲ್ಲಿ ನಾಯಕನಹಟ್ಟಿ ಠಾಣಾ ವ್ಯಾಪ್ತಿಯ ಎತ್ತಿನಹಟ್ಟಿ (ಗೊಲ್ಲಹಳ್ಳಿ) ಗ್ರಾಮದಲ್ಲಿ ಚಾಸಾ-1 ಮತ್ತು 2 ರವರು ತಮ್ಮ ವಾಸದ ಮನೆ ಬಳಿ ಇದ್ದಾಗ ಇರುವ ಆರೋಪಿತರು ಬಂದು ಚಾಸಾ-1 ಮತ್ತು 2 ರವರನ್ನು ಕುರಿತು ಸೂಳೆಮಗನೆ, ಬೋಳಿಮಗನೆ ಎಂದು ಬಾಯಿಗೆ ಬಂದಂತೆ ಬೈದಾಡುತ್ತ ಗಲಾಟೆ ಶುರುಮಾಡಿ 4 ನೇ ಆರೋಪಿಯೂ ತನ್ನ ಕೈಯಲ್ಲಿದ್ದ

ಕೊಡಲಿಯಿಂದ ಚಾಸಾ–2 ರವರ ಮೇಲೆ ಹಲ್ಲೆ ಮಾಡಲು ಮುಂದದಾಗ ಚಾಸಾ–1 ಮತ್ತು 2 ರವರು ಕಿರುಚಿಕೊಂಡಿರುತ್ತಾರೆ, ಹಾಗೂ 4 ನೇ ಆರೋಪಿರವರು ಚಾಸಾ–2 ರವರಿಗೆ ಸೂಳೆಮಗನೆ ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಅಲ್ಲಿಯೇ ಇದ್ದ ಕಲ್ಲನ್ನು ತೆಗೆದುಕೊಂಡು ಚಾಸಾ–2 ರವರಿಗೆ ಎಸೆದಿದ್ದು, ಕಲ್ಲು ಚಾಸಾ–2 ರವರ ಎದೆಗೆ ಬಿದ್ದಿರುತ್ತದೆ. ಈ ಬಗ್ಗೆ ಚಾಸಾ–2 ರವರು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ, ಅಂತಾ ತನಿಖೆಯಿಂದ ಧೃಡಪಟ್ಟಿರುತ್ತದೆ, ಅಂತ ನಾಯಕನಹಟ್ಟಿ ಪೊಲೀಸ್ ಠಾಣೆ ಪಿ.ಎಸ್.ಐ ರವರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

12. ದೋಷಾರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ಅಭಿಯೋಜನಾ ಪಕ್ಷದವರು ಮೂವರನ್ನು ಸಾಕ್ಷಿದಾರರನ್ನಾಗಿ ಪಿ.ಡಬ್ಲ್ಯೂ–1 ರಿಂದ ಪಿ.ಡಬ್ಲ್ಯೂ–3 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಪಿ.ಡಬ್ಲ್ಯೂ–1 ಪಾಪಯ್ಯ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ–2 ನನ್ನ ಮಗ, ಚಾಸಾ–3 ನನ್ನ ಸೊಸೆ, ಆರೋಪಿತರ ಪರಿಚಯವಿರುತ್ತದೆ. ಆರೋಪಿತರು ನನಗೆ ಹಾಗೂ ಚಾಸಾ–2 ಹಾಗೂ 3 ರವರಿಗೆ ಯಾವಾಗ ಏನೂ ಮಾಡಿರುವುದಿಲ್ಲ. ಆರೋಪಿತರು ನನಗೆ ಹಾಗೂ ಚಾಸಾ–2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಡಲಿ ಮತ್ತು ಕಲ್ಲಿನಿಂದ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆದರೆ ಒಂದು ದಿನ ನಾನು ನನ್ನ ವೈಯಕ್ತಿಕ ಕೆಲಸಕ್ಕೆ

ಪೊಲೀಸ್ ಠಾಣೆ ಹೋಗಿದ್ದಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ನಿಪಿ–1 ರಲ್ಲಿ ಏನು ಬರೆಯಲಾಗಿದೆ ನನಗೆ ಮಾಹಿತಿ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ, ಅಂತ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಿದ್ದು, ಸದರಿ ಪಿ.ಡಬ್ಲ್ಯೂ–1 ರವರು ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ.

13. ಅದೇ ರೀತಿಯಾಗಿ ಪಿ.ಡಬ್ಲ್ಯೂ–2 ಮಲ್ಲಿಕಾರ್ಜುನ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಚಾಸಾ–1 ನನ್ನ ತಂದೆ, ಚಾಸಾ–3 ನನ್ನ ಹೆಂಡತಿ, ಆರೋಪಿತರ ಪರಿಚಯವಿರುತ್ತದೆ. ಆರೋಪಿತರು ನನಗೆ, ಚಾಸಾ–1 ಹಾಗೂ 3 ರವರಿಗೆ ಯಾವಾಗ ಏನೂ ಮಾಡಿರುವುದಿಲ್ಲ. ಆರೋಪಿತರು ನನಗೆ ಹಾಗೂ ಚಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಡಲಿ ಮತ್ತು ಕಲ್ಲಿನಿಂದ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾಗಳನ್ನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ,

ಅಂತ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಿದ್ದು, ಸದರಿ ಪಿ.ಡಬ್ಲ್ಯೂ–2 ರವರು ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ.

14. ಅದೇ ರೀತಿಯಾಗಿ ಪಿ.ಡಬ್ಲ್ಯೂ–3 ವಿಜಯಮ್ಮ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ–1 ರವರು ನನ್ನ ಮಾವ, ಚಾಸಾ–2 ನನ್ನ ಗಂಡ. ಆರೋಪಿತರ ಪರಿಚಯವಿರುತ್ತದೆ. ಆರೋಪಿತರು ನನಗೆ, ಚಾಸಾ–1 ಹಾಗೂ 2 ರವರಿಗೆ ಯಾವಾಗ ಏನೂ ಮಾಡಿರುವುದಿಲ್ಲ. ಆರೋಪಿತರು ಚಾಸಾ–1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಡಲಿ ಮತ್ತು ಕಲ್ಲಿನಿಂದ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾಗಳನ್ನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ, ಅಂತ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಿದ್ದು, ಸದರಿ ಪಿ.ಡಬ್ಲ್ಯೂ–3 ರವರು ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ.

15. ಮೇಲ್ಕಂಡ ಪಿ.ಡಬ್ಯೂ-1 ರಿಂದ ಪಿ.ಡಬ್ಲ್ಯೂ-3 ರವರು ತಮ್ಮ ಮುಖ್ಯ ವಿಚಾರಣೆ ಹಾಗೂ ಪಾಟೀಸವಾಲಿನಲ್ಲಿ ನುಡಿದಿರುವ ಸಾಕ್ಷ್ಯವನ್ನು ಕೂಲಂಕುಷವಾಗಿ ಅವಲೋಕಿಸಿದಾಗ ಆರೋಪಿಗಳು ಮೇಲ್ಕಂಡ ಅಪರಾಧಗಳನ್ನು ಮಾಡಿರುವುದು ಕಂಡು ಬಂದಿರುವುದಿಲ್ಲ ಹಾಗೂ ಈ ಪ್ರಮುಖ ಸಾಕ್ಷಿದಾರರು ಅಭಿಯೋಜನಾ ಪಕ್ಷಕ್ಕೆ ಪೂರಕವಾಗಿ ಸಾಕ್ಷಿ ನುಡಿಯದೇ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಇತರೆ ಸಾಕ್ಷಿದಾರರಿಗೆ ಸಮನ್ಸ್ ನೀಡಿರುವುದಿಲ್ಲ. ಈ ಪ್ರಕರಣದಲ್ಲಿ ಲಭ್ಯವಿರುವ ಪಿ.ಡಬ್ಯೂ-1 ರಿಂದ ಪಿ.ಡಬ್ಲ್ಯೂ-3 ರವರ ಮೌಖಿಕ ಸಾಕ್ಷ್ಯವು ಅಭಿಯೋಜಕ ಪಕ್ಷದವರ ಕೇಸನ್ನು ಸಾಬೀತುಪಡಿಸದೆ ಇರುವುದರಿಂದ, ಅಭಿಯೋಜನೆಯು ಈ ಪ್ರಕರಣವನ್ನು ತಮ್ಮ ಪರವಾಗಿ ನಿಸ್ಸಂಶವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂಬ ನಿರ್ಣಯಕ್ಕೆ ಬಂದಿರುತ್ತೇನೆ ಹಾಗೂ ಆರೋಪಿಗಳು ಬಿಡುಗಡೆ ಹೊಂದಲು ಅರ್ಹರಾಗಿರುತ್ತಾರೆ ಎಂದು ನಿರ್ಣಯಿಸಿ ಅಂಶ ನಂ.1 ರಿಂದ 3 ಕ್ಕೆ ನಕಾರಾತ್ಮಕಾಗಿ ಉತ್ತರಿಸಿರುತ್ತೇನೆ.

16. <u>ಅಂಶ ನಂ.4</u>ಃ ಮೇಲ್ಕಂಡ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

# ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತ ದಂಡ ಸಂಹಿತೆ ಕಲಂ *504, 324, 506(2) ಸಹವಾಚಕ 34* ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ದೋಷಮುಕ್ತ ಅಂತ ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳು ಬರೆದು ಕೊಟ್ಟಿರುವ ವೈಯಕ್ತಿಕ ಹಾಗೂ ಜಾಮೀನುದಾರರ ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಮು.ಮಾಃ-1 ಒಂದು ಕಬ್ಬಿಣದ ಕೊಡಲಿ, ಮು.ಮಾಃ-2 ಒಂದು ಒಳ ಹಿಡಿ ಗಾತ್ರದ ಒಂದು ಕಲ್ಲು ಇವು ಮೌಲ್ಯರಹಿತವಾಗಿದ್ದರಿಂದ ಇವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿಸಿ, ಸಹಿ ಮಾಡಿ ಇಂದು ಅಂದರೆ ದಿನಾಂಕ 14 ನೇ ಫೆಬ್ರವರಿ 2018 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಶ್ರೀ ಕೋಟೆಪ್ಪ ಕಾಂಬ್ಳೆ)
ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಯವರು ಚಳ್ಳಕೆರೆ.

# ಅನುಬಂಧ

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳುಃ

| | | |
|---|---|---|
| ಪಿ.ಡಬ್ಲ್ಯೂ–1 | ಃ | ಪಾಪಯ್ಯ, |
| ಪಿ.ಡಬ್ಲ್ಯೂ–2 | ಃ | ಮಲ್ಲಿಕಾರ್ಜನ, |
| ಪಿ.ಡಬ್ಲ್ಯೂ–3 | ಃ | ವಿಜಯಮ್ಮ. |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳುಃ

| | | |
|---|---|---|
| ನಿಪಿ–1 | ಃ | ದೂರು, |
| ನಿಪಿ–1(ಎ) | ಃ | ಪಿ.ಡಬ್ಲ್ಯೂ–1 ರವರ ಸಹಿ, |
| ನಿಪಿ–2 | ಃ | ಪಿ.ಡಬ್ಲ್ಯೂ–2 ರವರ ನಿರಾಕರಿಸಿದ ಹೇಳಿಕೆ, |
| ನಿಪಿ–3 | ಃ | ಪಿ.ಡಬ್ಲ್ಯೂ–3 ರವರ ನಿರಾಕರಿಸಿದ ಹೇಳಿಕೆ, |

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲುಃ

| | | |
|---|---|---|
| ಮು.ಮಾ–1 | ಃ | ಒಂದು ಕಬ್ಬಿಣದ ಕೊಡಲಿ |
| ಮುಮಾ–2 | ಃ | ಒಂದು ಒಳ ಹಿಡಿ ಗಾತ್ರದ ಒಂದು ಕಲ್ಲು |

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾಗಿದ ದಾಖಲಾತಿಗಳುಃ

ಃ ಇಲ್ಲ ಃ

ಅಪರ ಸಿವಿಲ್ ನ್ಯಾಯಾದೀಶರು
ಮತ್ತು ಪ್ರ.ದ.ನ್ಯಾದಂ. ಯವರು ಚಳ್ಳಕೆರೆ.